# ಸಾಮಾಜಿಕ ವಾಸ್ತವತೆಗಳಲ್ಲಿ ಮಹಿಳಾ ವಿಮೋಚನೆಯ ಸವಾಲುಗಳು

**ಉಮೇಶ್ ನಾಯ್ಕ್ ಎನ್. ಹುಳಿಯಾರ್**

ಕನ್ನಡ ಅತಿಥಿ ಉಪನ್ಯಾಸಕರು, ಬಿ.ಸಿ.ಎ ಆರ್ಟ್ಸ್ ವಿಭಾಗ, ಜ್ಞಾನಭಾರತಿ ಆವರಣ

ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

**DOI: https://doi.org/10.5281/zenodo.18699390**

## ABSTRACT:

ಮಹಿಳಾ ವಿಮೋಚನೆಯು ಮಹಿಳೆಯ ಅಸ್ಮಿತೆ, ಸಮಾನ ಹಕ್ಕು, ಆತ್ಮಗೌರವ ಮತ್ತು ಮಾನವೀಯ ಬದುಕಿಗಾಗಿ ನಡೆಯುವ ಸಮಗ್ರ ನೈತಿಕ ಹೋರಾಟವಾಗಿದೆ. ಇದು ಕೇವಲ ಪ್ರತಿಭಟನೆಯಲ್ಲ. ಮಹಿಳೆಯ ಬದುಕಿನ ಅಳಿವು–ಉಳಿವಿನ ಪ್ರಶ್ನೆಯನ್ನು ಸ್ಪರ್ಶಿಸುವ ಚಳುವಳಿಯಾಗಿದೆ. ಸ್ತ್ರೀವಾದಿ ಚಿಂತನೆಗಳು ಲಿಂಗ ಅಸಮಾನತೆ ನಿಯಮವಲ್ಲ, ಸಮಾಜ ನಿರ್ಮಿತ ಎಂಬುದನ್ನು ಸ್ಪಷ್ಟಪಡಿಸಿ, ಅಧಿಕಾರದ ಅಸಮಾನ ನೆಲೆಯನ್ನು ಪ್ರಶ್ನಿಸುವ ದಿಕ್ಕನ್ನು ಮಹಿಳಾ ಚಳುವಳಿಗೆ ನೀಡಿವೆ.

90ರ ದಶಕದ ಕಾಲಘಟ್ಟದಲ್ಲಿ ಖಾಸಗೀಕರಣ, ಜಾಗತೀಕರಣ, ಧಾರ್ಮಿಕ ಮೂಲಭೂತವಾದ, ಮಾಧ್ಯಮಗಳ ವ್ಯಾಪಾರೀಕರಣ, ಸಂಘಟನೆಗಳ ಒಳಬಿರುಕುಗಳು ಮಹಿಳಾ ವಿಮೋಚನಾ ಹೋರಾಟಕ್ಕೆ ಹೊಸ ಸವಾಲುಗಳಾಗಿವೆ. ಕಾನೂನುಗಳಿದ್ದರೂ ಜಾಗೃತಿಯ ಕೊರತೆಯಿಂದ ಮಹಿಳೆಯರಿಗೆ ಅದರ ಪ್ರಯೋಜನ ಸಿಗುತ್ತಿಲ್ಲ. ಶಿಕ್ಷಣದ ಕೊರತೆ, ಹೆಣ್ಣು ಭ್ರೂಣಹತ್ಯೆ, ಬಾಲ್ಯವಿವಾಹ, ವರದಕ್ಷಿಣೆ, ಲೈಂಗಿಕ ಕಿರುಕುಳ, ವೇತನ ತಾರತಮ್ಯ, ದೇವದಾಸಿ ಪದ್ಧತಿ ಮುಂತಾದ ಅನಿಷ್ಟಗಳು ಮಹಿಳೆಯ ಬದುಕನ್ನು ಸಂಕೀರ್ಣಗೊಳಿಸುತ್ತಿವೆ. ಇವುಗಳ ನಡುವೆಯೂ ಕನ್ನಡ ಮಹಿಳಾ ಸಾಹಿತ್ಯ ಹೊಸ ಪರಿಭಾಷೆಯೊಂದಿಗೆ ರೂಪುಗೊಳ್ಳುತ್ತಿರುವುದು ಆಧುನಿಕೋತ್ತರ ಚಿಂತನೆಯ ಫಲವಾಗಿದೆ. ಮಹಿಳಾ ವಿಮೋಚನೆಯು ಹೊರಲೋಕದ ವಿರುದ್ಧದ ಹೋರಾಟ ಮಾತ್ರವಲ್ಲ ಇದು ಮಹಿಳೆಯ ಅಂತಃಸತ್ವವನ್ನು ಕಟ್ಟಿಕೊಳ್ಳುವ ಪ್ರಕ್ರಿಯೆಯೂ ಆಗಿದೆ. ಆತ್ಮವಿಶ್ವಾಸ, ಜಾಗೃತಿ, ಶಿಕ್ಷಣ, ಸಂವಾದ ಮತ್ತು ಮಾನವೀಯತೆ ಮಹಿಳಾ ಸಬಲೀಕರಣದ ಮೂಲ ಅಂಶಗಳಾಗಿವೆ. ಆಧುನಿಕೋತ್ತರ ಕಾಲಘಟ್ಟದ ತೊಂಬತ್ತರ ದಶಕದಲ್ಲಿ ಜಾತಿ, ಧರ್ಮ, ವರ್ಗಗಳ ಮಿತಿಗಳನ್ನು ಮೀರಿ ಮಹಿಳೆಯರು ಒಗ್ಗೂಡಿ ವಿಚಾರವಂತಿಕೆಯಿಂದ ಚಳುವಳಿಯನ್ನು ಕಟ್ಟಬೇಕಾಗಿದೆ. ಕುಟುಂಬ ವ್ಯವಸ್ಥೆಯನ್ನು ನಿರಾಕರಿಸುವುದಕ್ಕಿಂತ ಪರಸ್ಪರ ಗೌರವ ಮತ್ತು ಸಮಾನತೆಯನ್ನು ಬೆಳೆಸುವುದು ಮುಖ್ಯ. ಎಲ್ಲಾ ಮಹಿಳಾ ಸಂಘಟನೆಗಳು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಸಮಗ್ರತೆ ಸಾಧಿಸಿದಾಗ ಮಾತ್ರ ಮಹಿಳಾ ಚಳುವಳಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ಬಲವಾಗಿ ಬೆಳೆಯಬಹುದು.

## KEYWORDS:

ಮಹಿಳಾ ವಿಮೋಚನೆ, ಲಿಂಗ ಅಸಮಾನತೆ, ಜಾಗತೀಕರಣ, ಸಬಲೀಕರಣ, ಅಸ್ಮಿತೆ.

ಮಹಿಳಾ ಬದುಕಿನ ಒಟ್ಟಾರೆ ಅಭ್ಯುದಯ ಮತ್ತು ಪ್ರಗತಿಗಾಗಿ ನಡೆಯುವ ಹೋರಾಟವನ್ನು ಮಹಿಳಾ ಚಳುವಳಿ ಅಥವಾ ಮಹಿಳಾ ವಿಮೋಚನಾ ಹೋರಾಟ ಎಂದು ಕರೆಯಬಹುದು. ಇದು ಕೇವಲ ಪ್ರತಿಭಟನೆ, ಪ್ರತಿವಾದ, ಘರ್ಷಣೆಗಳ ಮೂಲಕ ವ್ಯಕ್ತವಾಗುವ ಚಟುವಟಿಕೆ ಮಾತ್ರವಲ್ಲ; ಮಹಿಳಾ ಬದುಕಿನ ಅಳಿವು–ಉಳಿವಿನ ಪ್ರಶ್ನೆಯೂ ಆಗಿದೆ. ಇತಿಹಾಸವನ್ನು ಗಮನಿಸಿದರೆ ಶತಮಾನಗಳಿಂದ ಒಂದು ಗುಂಪು ಇನ್ನೊಂದು ಗುಂಪನ್ನು ಆಳಿದ ಸಂದರ್ಭದಲ್ಲಿ, ಅವರ ನಡುವಿನ ಸಂಬಂಧವು ಹೋರಾಟದ ಬಣ್ಣವನ್ನು ಪಡೆದುಕೊಂಡಿದೆ. ಈ ಹಿನ್ನೆಲೆ ಮಹಿಳೆಯರ ಹೋರಾಟವನ್ನು ಕೇವಲ ವಿರೋಧದ ಮನೋಭಾವನೆ ಎಂದು ನೋಡುವುದಕ್ಕಿಂತ, ಅಸ್ತಿತ್ವದ ಹಕ್ಕಿಗಾಗಿ ನಡೆಸುವ ನೈತಿಕ ಹೋರಾಟವೆಂದು ಪರಿಗಣಿಸಬೇಕಾಗಿದೆ. ವಿಮೋಚನಾ ಚಳುವಳಿಯ ಪರಿಣಾಮವಾಗಿ ಆಧುನಿಕೋತ್ತರ ಕಾಲಘಟ್ಟದಲ್ಲಿ ಕನ್ನಡ ಸಾಹಿತ್ಯವು ಮಹಿಳಾ ಅನುಭವಗಳನ್ನು ಹೊಸ ದೃಷ್ಟಿಕೋನದಿಂದ ಅನ್ವೇಷಿಸಲು ಪ್ರಾರಂಭಿಸಿತು. ಈ ಹಂತದಲ್ಲಿ ಮಹಿಳೆ ಕೇವಲ ದೌರ್ಬಲ್ಯದ ಪ್ರತೀಕವಾಗಿರದೇ ತನ್ನ ಅಸ್ಮಿತೆ, ದೇಹ, ಮನಸ್ಸು, ಭಾಷೆ, ಇತಿಹಾಸ ಮತ್ತು ಸಾಮಾಜಿಕ ಸಂಬಂಧಗಳನ್ನು ಪುನರ್ ಪರಿಶೀಲಿಸುವ ಚೇತನವಾಗಿ ಕಾಣಿಸಿಕೊಂಡಿದ್ದಾಳೆ.

ಸ್ವಾತಂತ್ರ್ಯಕ್ಕೂ ಮುನ್ನ ರಾಷ್ಟ್ರೀಯ ಹೋರಾಟದಲ್ಲಿ ಮಹಿಳೆಯರ ಸಕ್ರಿಯ ಪಾಲ್ಗೊಳ್ಳುವಿಕೆ ಕಂಡುಬಂತು. ಆದರೆ ಸ್ವಾತಂತ್ರ್ಯೋತ್ತರದಲ್ಲಿ ಮಹಿಳಾ ಚಳುವಳಿ ತನ್ನ ಹಿಂದಿನ ಕಾವು ಮತ್ತು ತೀವ್ರತೆಯನ್ನು ಕಳೆದುಕೊಂಡಿತು. ದೇಶ ವಿಭಜನೆಯ ಆಘಾತ, ದೀರ್ಘ ಹೋರಾಟದ ನಂತರದ ವಿಶ್ರಾಂತಿ, ಜಾತಿ–ವರ್ಗ ಪ್ರಶ್ನೆಗಳ ಪ್ರಾಬಲ್ಯ ಹಾಗೂ ಹೋರಾಟಗಾರರು ಆಡಳಿತ ವ್ಯವಸ್ಥೆಯೊಳಗೆ ಸೇರುವ ಪರಿಸ್ಥಿತಿಗಳು ಎಲ್ಲವೂ ಮಹಿಳಾ ಚಳುವಳಿಯ ಬದಲಾದ ಸ್ಥಿತಿಗೆ ಕಾರಣವಾದವು.

ಎಪ್ಪತ್ತರ ದಶಕದಲ್ಲಿ ಮತ್ತೆ ಮಹಿಳಾ ಚಳುವಳಿ ಹೊಸ ರೂಪದಲ್ಲಿ ಚಿಗುರಿತು. ರೈತ, ಕಾರ್ಮಿಕ, ದಲಿತ, ಪರಿಸರ, ಖಾಸಗೀಕರಣ ವಿರೋಧಿ ಹೋರಾಟಗಳಲ್ಲಿ ಮಹಿಳಾ ಪ್ರಶ್ನೆಯೂ ಪ್ರಸ್ತುತವಾಯಿತು. ನಂತರ 90ರ ದಶಕದಲ್ಲಿ ಮಹಿಳಾ ಚಳುವಳಿಯು ಹೊಸ ಸಿದ್ಧಾಂತಗಳನ್ನು ಅಳವಡಿಸಿಕೊಂಡು ಸ್ತ್ರೀಯರ ಅಭ್ಯುದಯಕ್ಕಾಗಿ ಶ್ರಮಿಸಿದವು. ಕನ್ನಡ ಮಹಿಳಾ ಸಾಹಿತ್ಯದಲ್ಲಿ ಫೆಮಿನಿಸ್ಟ್ ಚಿಂತನೆಗೆ ಹೊಸ ಮಾದರಿಗಳು ರೂಪುಗೊಂಡವು. ಸಾಮಾಜಿಕ ಸುಧಾರಣಾ ಪರಂಪರೆಯೊಂದಿಗೆ ಹೊಸ ತಲೆಮಾರಿನ ಸ್ತ್ರೀವಾದಿ ಚಿಂತನೆಯ ಹೊಸ ಆಲೋಚನೆಗಳು ಮುಖಾಮುಖಿಯಾದವು. 1975ರ ಅಂತರಾಷ್ಟ್ರೀಯ ಮಹಿಳಾ ವರ್ಷ ಹಾಗೂ 1976–85ರ ಮಹಿಳಾ ದಶಕ ಆಚರಣೆಗಳು ಮಹಿಳಾ ಹೋರಾಟಕ್ಕೆ ಜಾಗತಿಕ ನೆಲೆಯಲ್ಲಿ ಹೊಸ ಚೌಕಟ್ಟನ್ನು ನೀಡಿದವು. ಸ್ತ್ರೀವಾದಿ ದೃಷ್ಟಿಕೋನ ಭಾರತೀಯ ಮಹಿಳಾ ಹೋರಾಟಕ್ಕೆ ಸೈದ್ಧಾಂತಿಕ ನೆಲೆ ಒದಗಿಸಿತು. ಸ್ತ್ರೀವಾದವು ಲಿಂಗ ಅಸಮಾನತೆ ಪ್ರಕೃತಿಯ ನಿಯಮವಲ್ಲ, ಅದು ಸಮಾಜ ನಿರ್ಮಿತ ಕಲ್ಪನೆ ಎಂಬುದನ್ನು ಬೆಳಗಿಸಿತು. ಲಿಂಗ ಅಸಮಾನತೆ ಅಧಿಕಾರದ ಪ್ರಶ್ನೆಯೊಂದಿಗೆ ಹೇಗೆ ಜೋಡಿಸಿಕೊಂಡಿದೆ ಎಂಬುದನ್ನು ವಿಶ್ಲೇಷಿಸಿತು. ಇದರಿಂದ ಮಹಿಳಾ ವಿಮೋಚನೆ ಎಂದರೆ ಕೇವಲ ಸಾಮಾಜಿಕ ಸ್ವಾತಂತ್ರ್ಯವಲ್ಲ, ಅಧಿಕಾರದ ಅಸಮಾನ ನೆಲೆಯನ್ನು ಪ್ರಶ್ನಿಸಿ ಬದಲಾಯಿಸುವ ಪ್ರಕ್ರಿಯೆಯೆಂದು ಅರ್ಥವಾಯಿತು.

ಇಂದು ಮಹಿಳಾ ವಿಮೋಚನೆ ಕುರಿತು ಚರ್ಚೆ, ವಾಚಿಕೆಗಳಲ್ಲಿ ಮುನ್ನೆಲೆಗೆ ಬಂದ ಪರಿಕಲ್ಪನೆ ಪ್ರಕ್ರಿಯೆಯಲ್ಲಿ ಮುಖ್ಯವಾದದ್ದು ಅಧಿಕಾರದ ಅಸಮಾನ ನೆಲೆಯನ್ನು ಅರಿತುಕೊಳ್ಳುವುದು. ಅದನ್ನು ಪ್ರಶ್ನಿಸುವುದು ಮತ್ತು ಬದಲಾಯಿಸುವುದು ಹಾಗೂ ಇದಕ್ಕೆ

ಬೇಕಾದ ಎಲ್ಲಾ ಬಗೆಯ ಸಾಮರ್ಥ್ಯವನ್ನು ಮಹಿಳೆ ಪಡೆದುಕೊಳ್ಳುವುದನ್ನು ಒಳಗೊಳ್ಳುತ್ತದೆ. ಮಹಿಳಾ ಪರವಾದ ಕಾನೂನು ಕಾಯಿದೆಗಳು ಮಹಿಳಾ ಸಬಲೀಕರಣವನ್ನು ಒಂದು ನೆಲೆಯಲ್ಲಿ ಕಟ್ಟುತ್ತಿವೆ. ಆದರೆ ಇವು ಮಹಿಳಾ ಬದುಕನ್ನು ನಿಜವಾಗಿ ತಲುಪಬೇಕಾದರೆ ಮಹಿಳೆಯರು ಲಿಂಗ ಸೂಕ್ಷ್ಮದ ಬಗ್ಗೆ ಹಾಗೂ ಸಂವಿಧಾನಾತ್ಮಕ ಹಕ್ಕುಗಳ ಬಗ್ಗೆ ಜಾಗೃತರಾಗಬೇಕು. ಬದಲಾದ ಸಾಮಾಜಿಕ ಸಂದರ್ಭದಲ್ಲಿ ಮಹಿಳಾ ಸಮಸ್ಯೆಯ ಸ್ವರೂಪ ಬದಲಾಗಿದೆ. ಮಹಿಳಾ ಹೋರಾಟದ ಆದ್ಯತೆಯ ಪ್ರಶ್ನೆಗಳು ಬದಲಾಗಿವೆ ಹಾಗೂ ಮಹಿಳೆಯರನ್ನು ಹೊಸ ಪರಿಭಾಷೆಯಲ್ಲಿ ಬದಲಿಸಿವೆ. ತನ್ನದೇ ಇತಿಹಾಸವನ್ನು ಹೊಂದಿರುವ ಮಹಿಳಾ ಚಳುವಳಿಗೆ ಈ ಕಾಲಮಾನದಲ್ಲಿ ತನ್ನದೇ ಆದ ಸವಾಲುಗಳಿವೆ. ಇಂದಿನ ಬದಲಾಗುತ್ತಿರುವ ಸಾಮಾಜಿಕ ಪರಿಸರದಲ್ಲಿ ಮಹಿಳಾ ಸಮಸ್ಯೆಗಳ ಸ್ವರೂಪ ಬದಲಾದಂತೆ ಮಹಿಳಾ ಚಳುವಳಿಯ ಆದ್ಯತೆಯ ಪ್ರಶ್ನೆಗಳು ಬದಲಾಗಿವೆ. ಹಾಗೆಯೇ ಭವಿಷ್ಯದ ಸಂಕೀರ್ಣವಾದ ಸವಾಲುಗಳು ಎದುರಾಗಿವೆ. ಮಹಿಳೆಯರಿಗೆ ಖಾಸಗೀಕರಣ, ಆಧುನೀಕರಣ, ಜಾಗತೀಕರಣಗಳು ಅಪಾಯವನ್ನು ತಂದೊಡ್ಡಿ ಅವಳನ್ನು ಭೋಗದ ವಸ್ತುವಾಗಿ ಪರಿಗಣಿಸಿ ವ್ಯಾಪಾರೀಕರಣಗೊಳಿಸುತ್ತಿವೆ. ಇದನ್ನು ಬಹಳ ಎಚ್ಚರದಿಂದ ಎದುರಿಸಬೇಕಾಗಿದೆ. ಅಭಿವೃದ್ಧಿಯ ವಿಷಯದಲ್ಲಿ ಏಕಮಾನದ ಆಧಾರದ ಮೇಲೆ ಲಿಂಗ ಸೂಕ್ಷ್ಮತೆಯನ್ನು ಗಮನಿಸದೇ ಏಕ ನಿರ್ಧಾರವನ್ನು ಕೈಗೊಳ್ಳುತ್ತಿರುವುದರಿಂದ ಮಹಿಳೆ ಅತಂತ್ರ ಸ್ಥಿತಿಯನ್ನು ಹೊಂದುತ್ತಿದ್ದಾಳೆ.

ಮಹಿಳೆ ಇನ್ನು ಘೋರತರದ ಕಷ್ಟವನ್ನು ಧಾರ್ಮಿಕ ಮೂಲಭೂತವಾದಗಳಿಂದ ಅನುಭವಿಸುತ್ತಿದ್ದಾಳೆ. ಅವರು ಕೈಗೊಳ್ಳುವ ಮತಾಂಧತೆ ಎಂಬ ಧಾರ್ಮಿಕ ಭಯೋತ್ಪಾದಕತೆ ಮಹಿಳೆಗೆ ನರಕ ಸಾದೃಶ್ಯವನ್ನು ತೋರಿಸುತ್ತದೆ. ಈ ಅತೀಸೂಕ್ಷ್ಮ ಗ್ರಹಿಕೆಗಳನ್ನು ಆಧುನಿಕ ಮಹಿಳಾ ಹೋರಾಟಗಾರರು ಅರಿಯಬೇಕಾಗಿದೆ. ಮಹಿಳೆಯರು ಯಾರ ವಿರುದ್ಧ ಹೋರಾಡಬೇಕು? ಅವಳು ಹೊರ ಜಗತ್ತಿನೊಡನೆ ಹೋರಾಡಿದ ಮಾತ್ರಕ್ಕೆ ಸಂಪೂರ್ಣವಾಗಿ ತನ್ನ ತನವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ? ಮಹಿಳಾ ವಿಮೋಚನಾ ಹೋರಾಟ ಹೊರಲೋಕದೊಡನೆ ನಡೆಸುವ ಹೋರಾಟ ಅಷ್ಟೇ ಅಲ್ಲ. ಹೆಣ್ಣಿನ ಅಂತಃಸತ್ವದ ಒಳಲೋಕವನ್ನು ಕಟ್ಟಿಕೊಳ್ಳುವ ಹೋರಾಟವೂ ಆಗಬೇಕು. ಸಮಾಜದಲ್ಲಿ ಮಹಿಳಾ ಹೋರಾಟಗಾರರ ಬಗ್ಗೆ ಈಗಾಗಲೇ ಅಪನಂಬಿಕೆಯಿದೆ. ಅವರು ಪುರುಷ ವಿರೋಧಿಗಳು, ಗಂಡಸರ ಆಸ್ತಿಯನ್ನು ಲಪಟಾಯಿಸುವರು ಎಂಬ ಕೆಟ್ಟ ಮನೋಭಾವನೆ ಬೆಳೆದಿದೆ. ಇಂತಹ ಸಂದರ್ಭಗಳಲ್ಲಿ ಮಹಿಳಾ ಹೋರಾಟವು ಧರ್ಮ, ಜಾತಿ, ವರ್ಗಗಳ ಮಿತಿಯನ್ನು ಮೀರಿ ಮಾನವೀಯ ನೆಲೆಯಲ್ಲಿ ಸಾಗಬೇಕಾಗಿದೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ, ಆವೇಶ, ಗದ್ದಲ, ಆರೋಪಗಳಿಲ್ಲದೆ ವೈಚಾರಿಕ ನೆಲೆಯಲ್ಲಿ ಮಹಿಳಾ ವಿಮೋಚನಾ ಚಳವಳಿಯನ್ನು ಕಟ್ಟಬೇಕಾಗಿದೆ. ಮಹಿಳಾ ಹೋರಾಟಗಾರರು ನಮ್ಮ ಸಾಂಸ್ಕೃತಿಕ ಹಾಗೂ ಸಾಮಾಜಿಕ ವಾಸ್ತವತೆಯಡಿಯಲ್ಲಿ ಹೋರಾಟವನ್ನು ಮಾಡಬೇಕಾಗಿದೆ. "ಭಾರತದಲ್ಲಿ ಜಾತಿ, ವರ್ಗ, ಕೋಮುಗಳು ಪ್ರಬಲವಾಗಿವೆ. ಮಹಿಳೆಯರು ಇವುಗಳ ಹಿನ್ನೆಲೆಯಲ್ಲಿ ಕವಲನ್ನು ಹೊಂದದೆ ವಾಸ್ತವತೆಯನ್ನು ಅರಿತುಕೊಂಡು ಸೋದರಿತ್ವದ ಭಾವವನ್ನು ಹೊಂದಿ, ಒಗ್ಗೂಡಿ ಮಹಿಳಾ ಚಳವಳಿಯನ್ನು ಕೈಗೊಳ್ಳುವುದು ಬಹುದೊಡ್ಡ ಸವಾಲಾಗಿದೆ. ಕೇವಲ ಪ್ರಚಾರಕ್ಕಾಗಿ ಹೋರಾಟಗಳನ್ನು ಮಾಡದೇ, ಜಾತಿ ಮತ್ತು ಕೋಮುಗಳಿಗೆ ಬದ್ಧರಾಗದೇ ನಿಜವಾದ ವಿಚಾರವಂತಿಕೆಯನ್ನು ಹೊಂದಿ, ಸ್ತ್ರೀವಾದಿತನದ ಉದ್ದೇಶಗಳನ್ನು ಅರಿತುಕೊಂಡು ತಮ್ಮ ಹೋರಾಟಕ್ಕೆ ಮುನ್ನುಡಿ ಇಡಬೇಕು"1. (ಮಹಿಳಾ ಚಳುವಳಿಯ ಮಜಲುಗಳು: ಸಂ. ಎನ್.

ಗಾಯಿತ್ರಿ (1998), ನವಕರ್ನಾಟಕ ಪ್ರಕಾಶನ, ಬೆಂಗಳೂರು ಪು.03) ಅಧಿಕಾರ, ಪ್ರದೇಶ, ಭಾಷಾ ಮಿತಿಗಳು ಮಹಿಳಾ ಸಂಘಟನೆಗಳಲ್ಲಿ ಮಹಿಳೆಯರ ನಡುವೆಯೇ ಬಿರುಕನ್ನು ಉಂಟು ಮಾಡುತ್ತಿವೆ. ಇವರು ಸಾಮಾನ್ಯ ಹೋರಾಟಗಾರರಿಗೆ ಪ್ರಚಾರಕ್ಕೆ ಬೇಕಾದ ವಸ್ತುವಿನಂತೆ ಕಾಣುತ್ತಿದ್ದಾರೆ. ಮಹಿಳಾ ವಿಮೋಚನೆ ಹೊರಲೋಕದ ವಿರುದ್ಧದ ಹೋರಾಟ ಮಾತ್ರವಲ್ಲ; ಹೆಣ್ಣಿನ ಅಂತಃಸತ್ವವನ್ನು ಕಟ್ಟಿಕೊಳ್ಳುವ ಹೋರಾಟವೂ ಆಗಿದೆ. ಆತ್ಮಗೌರವ, ಆತ್ಮವಿಶ್ವಾಸ, ಜಾಗೃತಿ, ಶಿಕ್ಷಣ ಇವುಗಳೆಲ್ಲವೂ ಮಹಿಳಾ ವಿಮೋಚನೆಯ ಅವಿಭಾಜ್ಯ ಅಂಗಗಳಾಗಿವೆ.

ಮಹಿಳಾ ಸಂಘಟನೆಗಳಲ್ಲಿ ಪ್ರಚಾರಕ್ಕಾಗಿ ನಡೆಯುವ ಹೋರಾಟಗಳು ನಿಜವಾದ ಸಮಸ್ಯೆಗಳನ್ನು ಮುಚ್ಚುತ್ತಿವೆ. ಸಂತ್ರಸ್ತೆಯೊಡನೆ ಸೆಲ್ಫಿ ತೆಗೆದುಕೊಳ್ಳುವಂತಹ ಘಟನೆಗಳು ಮಹಿಳಾ ಹೋರಾಟದ ನೈತಿಕತೆಯನ್ನು ಪ್ರಶ್ನಿಸುತ್ತವೆ. ಇಂತಹ ಮಹಿಳೆ, ಮಹಿಳೆಯರ ನಡುವಿನ ಬಿರುಕುಗಳನ್ನು ಮುಚ್ಚದೇ ನಡೆಸುವ ಹೋರಾಟಕ್ಕೆ ಯಾವುದೇ ಮೌಲ್ಯವೂ ಇರುವುದಿಲ್ಲ. ಸ್ತ್ರೀವಾದದ ತತ್ವ ಸಿದ್ಧಾಂತಗಳಲ್ಲಿ ಸರ್ಕಾರ ಹಾಗೂ ಸರ್ಕಾರೇತರ ಸಂಘಟನೆಗಳು ಭಿನ್ನ ಭಿನ್ನವಾಗಿ ಪ್ರವರ್ತಿಸುತ್ತಿವೆ. ಇದರಿಂದ ಸಾಮಾನ್ಯ ಮಹಿಳೆಯರಿಗೆ ಯಾವುದನ್ನು ಒಪ್ಪಿಕೊಳ್ಳಬೇಕೆಂಬ ದಿಕ್ಕು ಕಾಣದಾಗಿದೆ. ಹೊರಗಿನ ಲೋಕದಲ್ಲಿಯೇ ಆಗಲಿ, ಕುಟುಂಬದೊಳಗೆ ಆಗಲಿ ಶೋಷಣೆ ಕಂಡುಬಂದರೆ ಅದನ್ನು ಪ್ರಶ್ನಿಸುವಂತಾಗಬೇಕು.

ಇತ್ತೀಚೆಗೆ ಕೆಲ ಮಹಿಳೆಯರು ವಿವಾಹ ಕುಟುಂಬ ವ್ಯವಸ್ಥೆಯನ್ನೇ ನಿರಾಕರಿಸುವ ಮಟ್ಟಕ್ಕೆ ಮಾತನಾಡುತ್ತಿದ್ದಾರೆ. ವಿಚ್ಛೇದನದಿಂದ ಮಹಿಳೆ ಮುಕ್ತಳಾಗಬಹುದು ಎಂಬ ಭ್ರಮೆಯಲ್ಲಿದ್ದಾರೆ. ಆದರೆ ಇದು ಪರಿಹಾರವಲ್ಲ ಎಂಬುದನ್ನು ಮಹಿಳಾ ವಿಮೋಚನಾ ಹೋರಾಟಗಾರರು ಮನವರಿಕೆ ಮಾಡಿಕೊಡಬೇಕಾಗಿದೆ. ಕುಟುಂಬದಲ್ಲಿ ಹೆಣ್ಣಾಗಲೀ, ಗಂಡಾಗಲೀ ಒಂದೇ ಸಮಾನರು, ಆದ್ದರಿಂದ ಪರಸ್ಪರ ಪ್ರೀತಿ ಗೌರವದಿಂದ ಕಾಣುವುದನ್ನು ಕಲಿಯಬೇಕು ಎಂಬುದನ್ನು ತಿಳಿಸಬೇಕಾಗಿದೆ. ಮಹಿಳೆಯರು ಸಬಲೀಕರಣಗೊಳ್ಳಬೇಕಾದರೆ ಅಧಿಕಾರದ ನೆಲೆಯಲ್ಲಿ ಅಸಮಾನತೆಯನ್ನು ತೊಡೆದು ಹಾಕಬೇಕು. ಅದನ್ನು ಪ್ರಶ್ನಿಸುವುದು ಮತ್ತು ಬದಲಾಯಿಸುವುದು ಭವಿಷ್ಯತ್ತಿನ ಸವಾಲಾಗಿದೆ. ಇವತ್ತು ಮಹಿಳಾ ವಿಮೋಚನಾ ಹೋರಾಟಗಾರರ ಪ್ರಮುಖ ಆದ್ಯತೆ ಮಾನವ ಪರವಾಗಿರುವುದು, ಅನುದಾನಿತ-ಅನುದಾನರಹಿತ, ಸರ್ಕಾರ ಸರ್ಕಾರೇತರದ ಎಲ್ಲಾ ಮಹಿಳಾ ಸಂಘಟನೆಗಳು ಒಂದುಗೂಡಿ ಶೋಷಕ ಸಮಾಜವನ್ನು ಪ್ರಶ್ನಿಸುವ ಸಾಮರ್ಥ್ಯವನ್ನು ಪಡೆದುಕೊಳ್ಳುವುದಾಗಿದೆ. ಸರ್ಕಾರವನ್ನು ಒಳಗೊಂಡು ಎಲ್ಲಾ ಸಾರ್ವಜನಿಕ ವಲಯಗಳಲ್ಲಿ ಸಮುದಾಯವು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳನ್ನು ಸಾಮುದಾಯಿಕ ಹೋರಾಟದಿಂದ ಪರಿಹರಿಸಿಕೊಳ್ಳಲು ಸಾಧ್ಯವಿದೆ. ಇದಕ್ಕಾಗಿ ಸಮಾಜದ ಎಲ್ಲಾ ಸದಸ್ಯರ ಬೌದ್ಧಿಕ ಹಾಗೂ ಮಾನಸಿಕ ಬೆಂಬಲ ಪಡೆಯಲು ಸಂವಾದ ಪ್ರಾರಂಭಿಸಬೇಕಾಗಿದೆ. ಮೊಟ್ಟ ಮೊದಲು ಮಾನವೀಯತೆಯನ್ನು ಜಾಗೃತಗೊಳಿಸಬೇಕಾಗಿದೆ. ಈ ತಾತ್ವಿಕ ನಿಲುವಿನಲ್ಲಿ ಎಲ್ಲಾ ಮಹಿಳಾ ಸಂಘಟನೆಗಳು ತಮ್ಮ ಪ್ರತಿಷ್ಠೆಯ ಪ್ರಶ್ನೆಯನ್ನು ಬದಿಗಿಟ್ಟು ಮಹಿಳಾ ಚಳವಳಿಗೆ ಸಮಗ್ರತೆ ಮತ್ತು ಸಾಮರ್ಥ್ಯ ತರುವಂತ ಕಾರ್ಯಪ್ರವೃತ್ತವಾಗಬೇಕಾದ ತುರ್ತಿದೆ. ಕುಟುಂಬ ವ್ಯವಸ್ಥೆಯನ್ನು ಸಂಪೂರ್ಣವಾಗಿ ನಿರಾಕರಿಸುವುದು ಪರಿಹಾರವಲ್ಲ. ಪರಸ್ಪರ ಗೌರವ, ಸಮಾನತೆ, ಪ್ರೀತಿ ಇವು ಕುಟುಂಬವನ್ನು ಆರೋಗ್ಯಕರವಾಗಿಸುತ್ತವೆ. ವಿಚ್ಛೇದನವೇ ವಿಮೋಚನೆ ಎಂಬ ಭ್ರಮೆಯನ್ನು ನಿವಾರಿಸಬೇಕಾಗಿದೆ. ಆಗ ಮಾತ್ರ ಮಹಿಳಾ ಚಳುವಳಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ಇನ್ನಷ್ಟು ಬಲವಾಗಿ ಬೆಳೆಯಬಹುದು.

ಶಿಕ್ಷಣ ಕ್ಷೇತ್ರದಲ್ಲಿ ಪುರುಷರಿಗೆ ಹೋಲಿಸಿದರೆ, ಮಹಿಳಾ ಸಾಕ್ಷರತೆ ಇನ್ನೂ

ತೃಪ್ತಿದಾಯಕ ಮಟ್ಟಕ್ಕಿಲ್ಲ. ಸ್ವಾತಂತ್ರ್ಯಪೂರ್ವಕ್ಕಿಂತಲೂ ಇಂದು ಮಹಿಳಾ ಸಾಕ್ಷರತೆಯಲ್ಲಿ ಗಣನೀಯವಾಗಿ ಪ್ರಗತಿ ಕಂಡುಬಂದಿದೆಯಾದರೂ ತೃಪ್ತಿದಾಯಕವಾಗಿಲ್ಲ. ಆದ್ದರಿಂದ ಮಹಿಳಾ ಶಿಕ್ಷಣಕ್ಕಾಗಿ ಒತ್ತಾಸೆಯನ್ನು ಹೊಂದಿ, ಸಾಕ್ಷರತೆಯನ್ನು ಸಾಧಿಸಬೇಕಾಗಿದೆ. ಹೆಣ್ಣನ್ನು ಭ್ರೂಣದಲ್ಲಿಯೇ ಹೊಸಕಿ ಹಾಕುವ ಹುನ್ನಾರ ನಡೆಯುತ್ತಿದೆ. ಹೆಣ್ಣು ಶಿಶುಹತ್ಯೆಯನ್ನು ಅಮಾನವೀಯವಾಗಿ ಮಾಡುವ ಮೂಲಕ ಹೆಣ್ಣು ಮಕ್ಕಳನ್ನು ತಿರಸ್ಕಾರ ಮಾಡುತ್ತಿರುವುದರಿಂದ ಅವರಲ್ಲಿ ಬಾಲಾಪರಾಧ ಹೆಚ್ಚಾಗುತ್ತಿದೆ. ಕುಟುಂಬದಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚಿನ ಹೆಣ್ಣು ಮಕ್ಕಳು ಇದ್ದು, ಒಬ್ಬ ಗಂಡು ಮಗು ಇದ್ದರೆ, ಆ ಗಂಡು ಮಗುವನ್ನು ಶಾಲೆಗೆ ಕಳುಹಿಸಿ ಹೆಣ್ಣು ಮಕ್ಕಳನ್ನು ದುಡಿಯುವುದಕ್ಕೆ ಕಳುಹಿಸಿ, ಬಾಲಕಾರ್ಮಿಕರನ್ನಾಗಿ ಮಾಡಲಾಗುತ್ತಿದೆ. ಗಂಡು ಮಗುವಿನ ಅಪೇಕ್ಷೆಯಿಂದ ಗಂಡನ ಆಣತಿಯಂತೆ ಮಕ್ಕಳನ್ನು ಹೆರುವ ಯಂತ್ರದ ರೀತಿಯಲ್ಲಿ ಹೆಣ್ಣು ಮಕ್ಕಳನ್ನು ಹೆರುವ ತಾಯಂದಿರೇ ಯಥೇಚ್ಛವಾಗಿದ್ದು, ನಂತರ ಅವರನ್ನು ಸಾಕಲಾಗದೇ ಭಿಕ್ಷಾಟನೆಗೆ ಬಿಡಲಾಗುತ್ತಿದೆ.

ಬಾಲಕಿಯರು ಹಾಗೂ ಯುವತಿಯರನ್ನು ಅಪಹರಿಸುವುದು, ಮಾರಾಟ ಮಾಡುವುದು ಜರುಗುತ್ತಿದ್ದು, ವೇಶ್ಯಾವಾಟಿಕೆಯನ್ನು ಪೋಷಿಸಲಾಗುತ್ತಿದೆ. ಇಂದು ಬಾಲವೇಶ್ಯೆಯರ ಸಂಖ್ಯೆ ಅಧಿಕವಾಗುತ್ತಿದೆ. ಸಾಮೂಹಿಕ ವಿವಾಹದ ಹೆಸರಿನಲ್ಲಿ ಬಾಲ್ಯವಿವಾಹವನ್ನು ಅದ್ದೂರಿಯಾಗಿ ನಡೆಸಿಕೊಡಲಾಗುತ್ತಿದೆ. ಇದರಿಂದ ಸ್ತ್ರೀ ಸಮಾಜಕ್ಕೆ ಹಲವಾರು ರೀತಿಯ ಸಮಸ್ಯೆಗಳು ಕಂಟಕವಾಗಿ ಸುತ್ತಿಕೊಂಡಿವೆ. ಇವುಗಳ ವಿರುದ್ಧ ಧ್ವನಿ ಎತ್ತುವುದು ಮಹಿಳಾ ವಿಮೋಚನಾ ಹೋರಾಟದ ಆದ್ಯತೆಯಾಗಬೇಕು. ಸರ್ಕಾರವು ಮಹಿಳೆಯರ ಪರವಾದ ಹಲವಾರು ಕಾನೂನುಗಳನ್ನು ಜಾರಿಗೆ ತಂದರೂ ಜಾಗೃತಿಯ ಕೊರತೆಯಿಂದ ಫಲಕಾರಿಯಾಗುತ್ತಿಲ್ಲ.

ಬಡತನ ಮಹಿಳೆಯನ್ನು ಮತ್ತಷ್ಟು ಅಧೋಗತಿಗೆ ದೂಡುತ್ತಿದೆ. ಸ್ತ್ರೀಗೆ ಉದ್ಯೋಗ ದೊರೆತರೂ ವೇತನದಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಲೈಂಗಿಕ ಕಿರುಕುಳ ಎಂಬುದು ನಿರ್ದಿಷ್ಟ ಅಥವಾ ಸೀಮಿತ ಸ್ಥಳಕ್ಕೆ ಮೀಸಲಾಗಿಲ್ಲ. ಅದು ಮನೆ, ಶಾಲೆ, ಸಾರ್ವಜನಿಕ ಸ್ಥಳ, ಉದ್ಯೋಗ ಮಾಡುತ್ತಿರುವ ಜಾಗ ಎಲ್ಲಾ ಕಡೆಯೂ ಮಾನಸಿಕ ಹಿಂಸೆಯನ್ನು ಸ್ತ್ರೀ ಅನುಭವಿಸುತ್ತಿದ್ದಾಳೆ. ಕುಟುಂಬವು ರಕ್ಷಣೆಯೊದಗಿಸುತ್ತದೆ ಎಂಬುದು ಮಹಿಳೆಯ ವಿಷಯದಲ್ಲಿ ಬರೀ ಭ್ರಮೆಯಷ್ಟೆ. ವರದಕ್ಷಿಣೆ ಪಿಡುಗು ಇಂದು ಆಧುನೀಕರಣಗೊಳ್ಳುತ್ತಿದೆ. ಹೊಸ ರೂಪದಲ್ಲಿ ರಾರಾಜಿಸುತ್ತಿದೆ. ದೇವದಾಸಿ ಪದ್ಧತಿಯನ್ನು ಸರ್ಕಾರ ನಿಷೇಧಿಸಿದ್ದರೂ, ಧಾರ್ಮಿಕ ಭಯೋತ್ಪಾದಕರು ಸರ್ಕಾರದ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ. ಹೆಣ್ಣಿಗೆ ಗೌರವದ ಸ್ಥಾನವನ್ನು ಕಲ್ಪಿಸುವಲ್ಲಿ ಸಮೂಹ ಮಾಧ್ಯಮಗಳು ಸೋಲುತ್ತಿವೆ. ಅಲ್ಲದೆ ಹೆಣ್ಣಿನ ಸೌಂದರ್ಯವನ್ನು ವ್ಯಾಪಾರೀಕರಣಗೊಳಿಸುತ್ತಿವೆ. ಜಗತ್ತಿನ ಎಲ್ಲಾ ಧರ್ಮಗಳಲ್ಲಿ ಶೋಷಣೆ ಬಹುಶಃ ಹೆಣ್ಣಿನ ಜನನದಿಂದ ಮರಣದವರೆಗೂ ನಡೆಯುತ್ತಿದೆ. ಇಂದು ಮತಾಂಧರು ಹೆಚ್ಚಾಗಿಯೇ ಮಾಡುತ್ತಿದ್ದಾರೆ ಎನ್ನಬಹುದು. ಈ ಸಮಸ್ಯೆಗಳು ಹಿಂದೆಯೂ ಇದ್ದವು ಈಗಲೂ ಇವೆ, ಮುಂದೆಯೂ ಇವು ಸವಾಲಾಗಿ ಕಂಡುಬರುತ್ತವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.

ಹೀಗೆ ಪರಸ್ಪರ ಭಿನ್ನಾಭಿಪ್ರಾಯಗಳಿಂದ ಒಗ್ಗೂಡುವುದರ ಬದಲಾಗಿ ಪ್ರತ್ಯೇಕವಾದ ಗುಂಪುಗಳನ್ನು ನಿರ್ಮಿಸಿಕೊಂಡು ತಮಗರಿವಿಲ್ಲದೆಯೇ ಶಕ್ತಿಹೀನಗೊಳ್ಳುತ್ತಿವೆ. ಈ ಎಲ್ಲಾ ಸಂಘಟನೆಗಳನ್ನು ಒಂದು ನೆಲೆಗೆ ಸೆಳೆಯುವುದು ಕೂಡ ಭವಿಷ್ಯದ ಸವಾಲಾಗಿದೆ. ಯಾವುದೋ ಧರ್ಮದ ಹಿನ್ನೆಲೆಯಲ್ಲಿ ಕೆಲಸ ಮಾಡುವ ಮಹಿಳಾ ಸಂಘಟನೆಗಳನ್ನು ನಾವು

ಕಾಣಬಹುದು. ಈ ಸಂಘಟನೆಗಳು ತಮ್ಮ ಧರ್ಮದಲ್ಲಿ ಆಗುತ್ತಿರುವ ಶೋಷಣೆಯನ್ನು ಪ್ರಶ್ನಿಸದೇ ಒಪ್ಪಿಕೊಳ್ಳುತ್ತಿವೆ. ಇಲ್ಲಿ ಸ್ತ್ರೀವಾದಿತನವನ್ನು ಧರ್ಮ ಕೊಂದು ತನ್ನ ಪ್ರಾಬಲ್ಯವನ್ನು ಮೆರೆಯುತ್ತಿದೆ. ಇಂತಹ ಸಂಘಟನೆಗಳ ಬಗ್ಗೆ ಎಚ್ಚರಿಕೆಯಿಂದ ಇರುವುದು ಮೊದಲ ಆದ್ಯತೆಯಾಗಬೇಕಾಗಿದೆ. ವರದಕ್ಷಿಣೆ, ಸತಿಪದ್ಧತಿ ಇತ್ಯಾದಿ ಹಳೆಯ ಅನಿಷ್ಟಗಳ ಜೊತೆ ಮತ್ತೊಂದು ಸಾಮಾಜಿಕ ಅನಿಷ್ಟವೂ ಸೇರಿ ಮಹಿಳೆಯರಿಗೆ ಅನ್ಯಾಯವೆಸಗುತ್ತಲಿದೆ. ಅಂದರೆ ಹೆಣ್ಣು ಭ್ರೂಣಹತ್ಯೆ ಹುಟ್ಟುವ ಮಗು ಹೆಣ್ಣಾಗಿದ್ದರೆ, ಮೊದಲೇ ಗರ್ಭಪಾತ ಮಾಡಿಸಿಬಿಡುವ ಅಮಾನವೀಯ ಪದ್ಧತಿ, ಹಣವಂತರಿಗಲ್ಲದೆ, ಸಾಮಾನ್ಯರಿಗೂ ಗಲ್ಲಿ ಗಲ್ಲಿಗಳಿಗೂ ಈ ಸೌಲಭ್ಯ ಸಿಗುತ್ತಿರುವುದರಿಂದ ಕಾನೂನು ಈ ವಿಷಯದಲ್ಲಿ ವಿಫಲವಾಗಿದೆ. ಆದ್ದರಿಂದ ಮಹಿಳೆಯರು ಇದನ್ನು ವಿರೋಧಿಸಲು ಸಮರ್ಥರಾಗಿ ಯಾವುದೇ ಒತ್ತಾಯಕ್ಕೂ ಮಣಿಯದ ಗಟ್ಟಿತನವನ್ನು ಬೆಳೆಸಿಕೊಳ್ಳಬೇಕಾಗಿದೆ. ಆಧುನಿಕ ವೈದ್ಯಕೀಯ ಬೆಳವಣಿಗೆಯಿಂದ ಹೆಣ್ಣಿಗೆ ಅನುಕೂಲಕ್ಕಿಂತ ಅನಾನುಕೂಲ ಅಧಿಕವಾಗುತ್ತಿದೆ. ಹೊಸ ಹೊಸ ಸಂತಾನ ನಿರೋಧ ವಿಧಾನಗಳ ಪ್ರಯೋಗ ಹಳ್ಳಿಗಾಡಿನ ಅನಕ್ಷರಸ್ಥ ಮಹಿಳೆಯರ ಮೇಲೆ ಪ್ರಯೋಗಗೊಂಡು, ಅವರಿಗೆ ಅರಿವಿಲ್ಲದೆಯೇ ತಮ್ಮ ಪ್ರಾಣವನ್ನು ಕಳೆದುಕೊಳ್ಳುತ್ತಿದ್ದಾರೆ. ಈ ಬಗ್ಗೆ ಜಾಗ್ರತೆ ಹಾಗೂ ತಿಳುವಳಿಕೆ ಮೂಡಿಸುವುದು ಆಧುನಿಕ ಮಹಿಳಾ ವಿಮೋಚನಾ ಚಳುವಳಿಯ ಆದ್ಯತೆಯಾಗಬೇಕು. 90ರ ದಶಕದ ಮಹಿಳಾ ಹೋರಾಟವು ಸಮಾನತೆ ಮಾತ್ರವಲ್ಲದೆ ಮಹಿಳಾ ಸಾಹಿತ್ಯದಲ್ಲಿ ಆತ್ಮಕಥನಾತ್ಮಕ ಬರವಣಿಗೆ ಹೆಚ್ಚಾಯಿತು, 'ನಾನು' ಎಂಬ ಸ್ವರ ಪ್ರಬಲವಾಗಿ ಮನೆ, ಅಡುಗೆ ಮನೆ, ಮೌನ, ಎಲ್ಲವೂ ಸಾಹಿತ್ಯದ ವಿಷಯಗಳಾಗಿ ಹೊಸ ರೂಪ ತಾಳಿದವು. ಮಹಿಳೆಯರು ಸಾಹಿತ್ಯದ ಜೊತೆ ಜೊತೆಗೆ ಸಂಘಟನೆಗಳ ಮೂಲಕ ಸಮಾಜವನ್ನು ಸುಧಾರಿಸುವ ಕೆಲಸದಲ್ಲಿ ತೊಡಗಿದರು.

ಚರಿತ್ರೆಯನ್ನು ಅರಿತ ಮಹಿಳೆಯರು ಮಾತ್ರ ಹೊಸ ಚರಿತ್ರೆಯನ್ನು ನಿರ್ಮಿಸಬಲ್ಲರು. 90ರ ದಶಕದ ಮಹಿಳಾ ಹೋರಾಟಗಳ ಸ್ವರೂಪವನ್ನು ಅರಿತು, ಅದನ್ನು ಸಮಕಾಲೀನ ಸ್ತ್ರೀವಾದಿ ಹಿನ್ನೆಲೆಯಲ್ಲಿ ಅರ್ಥೈಸಿಕೊಂಡರೆ, ಸ್ತ್ರೀವಾದದ ಚರಿತ್ರೆಯನ್ನು ಪುನರ್ ರಚಿಸಬಹುದು. ಮಹಿಳಾ ವಿಮೋಚನಾ ಹೋರಾಟವು ಕೇವಲ ಮಹಿಳೆಯರ ಹೋರಾಟವಲ್ಲ; ಅದು ಮಾನವೀಯತೆಯ ಹೋರಾಟ. ಎಲ್ಲಾ ಮಹಿಳಾ ಸಂಘಟನೆಗಳು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು, ಸಮಗ್ರತೆ ಮತ್ತು ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಜಾಗೃತಿ, ಶಿಕ್ಷಣ, ಸಂಘಟನೆ, ಸಂವಾದ, ಮಾನವೀಯತೆ ಇವುಗಳ ಮೂಲಕ ಮಾತ್ರ ಮಹಿಳಾ ಚಳುವಳಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಆಯಾಮಗಳಲ್ಲಿ ಬಲವಾಗಿ ಬೆಳೆಯಬಹುದು.

**ಪರಾಮರ್ಶನ ಗ್ರಂಥಗಳು:**


1. ಗಾಯತ್ರಿ ನಾವಡ, (2000), ಭಾರತೀಯ ಸ್ತ್ರೀವಾದ: ಒಂದು ಸಂಕಥನ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
2. ಗಾಯತ್ರಿ ನಾವಡ, (2012), ಮಹಿಳಾ ಮೀಸಲಾತಿ ಮತ್ತು ಲಿಂಗರಾಜಕಾರಣ, ಗದಗ: ಲಡಾಯಿ ಪ್ರಕಾಶನ.
3. ಗಾಯತ್ರಿ ನಾವಡ, (1998), ಮಹಿಳಾ ಚಳುವಳಿಯ ಮಜಲುಗಳು, ಬೆಂಗಳೂರು: ನವಕರ್ನಾಟಕ ಪ್ರಕಾಶನ.
4. ಜ್ಯೋತಿ ಶಶಿಕುಮಾರ್, (2006), ಮಹಿಳಾ ಸಾಮಾಜಿಕತೆ, ಹಂಪಿ: ಮಹಿಳಾ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ.
5. ಪ್ರೀತಿ ಶುಭಚಂದ್ರ, (2002), ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
6. ವಿಜಯಶ್ರೀ ಸಬರದ (ಪ್ರ.ಸಂ), (2013), ಆಧುನಿಕ ಮಹಿಳಾ ಸಾಹಿತ್ಯ ಚರಿತ್ರೆ – ಕಾವ್ಯ, ವಿಜಯಾಪುರ: ಪ್ರಸಾರಾಂಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ.
7. ಹೊನ್ನುಸಿದ್ಧಾರ್ಥ ಸಿ.ಬಿ. (ಸಂ), (2014), ಆಧುನಿಕ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ, ಬೆಂಗಳೂರು: ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.